Joint Director Building Licence Cell (North)
N.R. Square
Bengaluru 560 002
No. 90 19-03-20
Date. 19-03-20
BBMP

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ಕಟ್ಟಡ ಪರವಾನಗಿ ಕೋಶ– ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD NORTH/ LP/0451/2013-14 ದಿನಾಂಕ: 17–03–2020

19-03-2020

## ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ)

ವಿಷಯ: ಆಸ್ತಿ ಖಾತಾ ಸಂಖ್ಯೆ: 20, ಸರ್ವೆ ನಂ. 115/1, ಭೈರತಿ ಗ್ರಾಮ, ಬಿದರಹಳ್ಳಿ ಹೋಬಳಿ, ವಾರ್ಡ್ ನಂ. 54, ಬೆಂಗಳೂರು, ಬೆಂಗಳೂರು , ಇಲ್ಲಿ ನಿರ್ಮಿಸುತ್ತಿರುವ ಬ್ಲಾಕ್ – 2 ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: : BBMP/Addl.Dir/JD NORTH/ LP/0451/2013-14 ದಿನಾಂಕ: 05–02–2015.

2) ತಮ್ಮ ಮನವಿ ಪತ್ರ ದಿನಾಂಕ: 14–05–2016 ಮತ್ತು 16–09–2019

* * * * * * *

ಆಸ್ತಿ ಖಾತಾ ಸಂಖ್ಯೆ: 20, ಸರ್ವೆ ನಂ. 115/1, ಭೈರತಿ ಗ್ರಾಮ, ಬಿದರಹಳ್ಳಿ ಹೋಬಳಿ, ವಾರ್ಡ್ ನಂ. 54, ಬೆಂಗಳೂರು, ಬೆಂಗಳೂರು ಇಲ್ಲಿ ಬ್ಲಾಕ್ – 1 & 2 ರಲ್ಲಿ ತಳ + ನೆಲ + ಮೇಲಿನ 13 ಒಟ್ಟಾರೆ 208 ಘಟಕಗಳುಳ್ಳ ವಸತಿ ಸಮುಚ್ಛಯ ಕಟ್ಟಡಕ್ಕೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಪ್ರಸ್ತುತ ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ತಳ + ನೆಲ + ಮೇಲಿನ 13 ಅಂತಸ್ತುಗಳ 104 ಘಟಕಗಳುಳ್ಳ ಬ್ಲಾಕ್ – 2 ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ನಡುಜಾಗಗಳನ್ನು ಬಿಟ್ಟು ಕಟ್ಟಡದ ನಿರ್ಮಾಣ ಮಾಡುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 05-03-2020 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಬ್ಲಾಕ್ – 2 ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ಶುಲ್ಕದೊಂದಿಗೆ ದಂಡ ಶುಲ್ಕ ಸೇರಿ ಒಟ್ಟು ರೂ. 5,02,000/- ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms331-TP/000636 ದಿನಾಂಕ: 13-03-2020 ರಂದು ಸಂದಾಯ ಮಾಡಿರುವುದರಿಂದ, ಸದರಿ ಬ್ಲಾಕ್ – 2 ವಸತಿ ಸಮುಚ್ಛಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1) ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

2) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಯಾವುದೇ ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

3) ನಕ್ಷೆ ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, (ನ್ಯಾಯಾಲಯದ ಆದೇಶದನ್ವಯ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಪರಿಗಣಿಸಿರುವುದರಿಂದ, ಉಲ್ಲೇಖ (2) ರ ಅವಧಿಯನ್ನು ಹೊರತುಪಡಿಸಿ ಮಾನ್ಯತೆಯನ್ನು ಹೊಂದಿರುತ್ತದೆ). ಸದರಿ ಕಾಲಮಿತಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

4) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5) ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ಮತ್ತು ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.

6) ವಿವಿಧ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು

7) ಮಂಜೂರಾತಿ ನಕ್ಷೆಯನ್ವಯ ಇನ್ನುಳಿದ ಬ್ಲಾಕ್ – 1 ರ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಿ, ಈ ಕಛೇರಿಯಿಂದ ಪ್ರಾರಂಭಿಕ ಪ್ರಮಾಣಪತ್ರ ಪಡೆಯತಕ್ಕದ್ದು.

8) ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ಕ್ಕೆ ಬದ್ಧವಾಗಿರತಕ್ಕದ್ದು.

9) ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.

10) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.

11) ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಪ್ರತಿ 240.00 ಚ.ಮೀ ಅನುಪಾತ ವಿಸ್ತೀರ್ಣಕ್ಕೆ ಒಂದರಂತೆ ಗಿಡವನ್ನು ನೆಡುವುದು.

19/03/2020

ಜಂಟಿ ನಿರ್ದೇಶಕರು (ಕಟ್ಟಡ ಪರವಾನಗಿ ಕೋಶ – ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

17/3/2020 17/03 17/3

ಗೆ,
ಮೆ: ಪ್ರೈಡ್ ಅಂಡ್ ಎಕ್ಸ್‌ಪರ್ಟ್ ಪ್ರಾಪರ್ಟೀಸ್ ಪ್ರೈ ಲಿ., ನ ನಿರ್ದೇಶಕರಾದ
ಶ್ರೀ ಬಿ.ಆರ್.ರವೀಂದ್ರ, ಜಿ.ಪಿ.ಎ.ದಾರರು,
ಮೆ: ಹೆಣ್ಣೂರು ಪ್ರಾಪರ್ಟೀಸ್, ಖಾತಾದಾರರು,
# 901, 9ನೇ ಮಹಡಿ, ಪ್ರೈಡ್ ಹುಲ್‌ಕಲ್,
# 116, ಲಾಲ್‌ಬಾಗ್ ರಸ್ತೆ,
ಬೆಂಗಳೂರು – 560 027

ಜಂಟಿ ನಿರ್ದೇಶಕರು (ನಗರ ಯೋಜನೆ–ಉತ್ತರ)
ಸಂ. 30
ದಿನಾಂಕ 27/11/2020
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD NORTH/ LP/0451/2013-14 ದಿನಾಂಕ: 27/11/2020

## ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ)

ವಿಷಯ: ಆಸ್ತಿ ಖಾತಾ ಸಂಖ್ಯೆ: 20, ಸರ್ವೆ ನಂ. 115/1, ಭೈರತಿ ಗ್ರಾಮ, ಬಿದರಹಳ್ಳಿ ಹೋಬಳಿ, ವಾರ್ಡ್ ನಂ. 54, ಬೆಂಗಳೂರು, ಬೆಂಗಳೂರು , ಇಲ್ಲಿ ನಿರ್ಮಿಸುತ್ತಿರುವ ಬ್ಲಾಕ್ – 1 ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: : BBMP/Addl.Dir/JD NORTH/ LP/0451/2013-14 ದಿನಾಂಕ: 05–02–2015.

2) ತಮ್ಮ ಮನವಿ ಪತ್ರ ದಿನಾಂಕ: 05–10–2020

* * * * * * *

ಆಸ್ತಿ ಖಾತಾ ಸಂಖ್ಯೆ: 20, ಸರ್ವೆ ನಂ. 115/1, ಭೈರತಿ ಗ್ರಾಮ, ಬಿದರಹಳ್ಳಿ ಹೋಬಳಿ, ವಾರ್ಡ್ ನಂ. 54, ಬೆಂಗಳೂರು, ಬೆಂಗಳೂರು ಇಲ್ಲಿ ಬ್ಲಾಕ್ – 1 & 2 ರಲ್ಲಿ ತಳ + ನೆಲ + ಮೇಲಿನ 13 ಒಟ್ಟಾರೆ 208 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ತದನಂತರ ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ತಳ + ನೆಲ + ಮೇಲಿನ 13 ಅಂತಸ್ತುಗಳ 104 ಘಟಕಗಳುಳ್ಳ ಬ್ಲಾಕ್ – 2 ವಸತಿ ಸಮುಚ್ಛಯ ಕಟ್ಟಡಕ್ಕೆ ದಿನಾಂಕ: 17–03–2020 ರಂದು ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ನೀಡಲಾಗಿರುತ್ತದೆ. ಪ್ರಸ್ತುತ ಸದರಿ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ತಳ + ನೆಲ + ಮೇಲಿನ 13 ಅಂತಸ್ತುಗಳ 104 ಘಟಕಗಳುಳ್ಳ ಬ್ಲಾಕ್ – 1 ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ನಡುಜಾಗಗಳನ್ನು ಬಿಟ್ಟು ಕಟ್ಟಡದ ನಿರ್ಮಾಣ ಮಾಡುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 06-11-2020 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಬ್ಲಾಕ್ – 1 ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ಶುಲ್ಕ ಒಟ್ಟು ರೂ. 88,000/- ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms331-TP/000202 ದಿನಾಂಕ: 10-11-2020 ರಂದು ಸಂದಾಯ ಮಾಡಿರುವುದರಿಂದ, ಸದರಿ ಬ್ಲಾಕ್ – 1 ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**ಷರತ್ತುಗಳು**

1) ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.

2) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಯಾವುದೇ ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.

3) ಅನುಮೋದಿತ ನಕ್ಷೆಯನ್ವಯ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

4) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ–ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5) ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ಮತ್ತು ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.

6) ವಿವಿಧ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು

7) ಮಂಜೂರಾತಿ ನಕ್ಷೆಯನ್ವಯ ಇನ್ನುಳಿದ ಕ್ಲಬ್‌ಹೌಸ್ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಿ, ಈ ಕಛೇರಿಯಿಂದ ಪ್ರಾರಂಭಿಕ ಪ್ರಮಾಣಪತ್ರ ಪಡೆಯತಕ್ಕದ್ದು.

8) ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ಕ್ಕೆ ಬದ್ಧವಾಗಿರತಕ್ಕದ್ದು.

9) ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.

**10)** ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.

27/11/2020

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

24/11/2020 24/11/2020 24/11/2020

ಗೆ,

ಮೆ: ಪ್ರೈಡ್ ಅಂಡ್ ಎಕ್ಸ್‌ಪರ್ಟ್ ಪ್ರಾಪರ್ಟೀಸ್ ಪ್ರೈ ಲಿ., ನ ನಿರ್ದೇಶಕರಾದ
ಶ್ರೀ ಬಿ.ಆರ್.ರವೀಂದ್ರ, ಜಿ.ಪಿ.ಎ.ದಾರರು,
ಮೆ: ಹೆಣ್ಣೂರು ಪ್ರಾಪರ್ಟೀಸ್, ಖಾತಾದಾರರು,
# 901, 9ನೇ ಮಹಡಿ, ಪ್ರೈಡ್ ಹುಲ್‌ಕಲ್,
# 116, ಲಾಲ್‌ಬಾಗ್ ರಸ್ತೆ,
ಬೆಂಗಳೂರು – 560 027